14) ಕನ್ನಡ ಮತ್ತು ಸಂಸ್ಕೃತಿ ಇಲಾಖೆ

15) ಕಾರ್ಮಿಕ ಇಲಾಖೆ.

65 (104) ಶ್ರೀ ಬಸವರಾಜು ಎ. ಎಸ್ (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ನೀರಾವರಿ ಸೌಲಭ್ಯಕ್ಕಾಗಿ ನಿರಂತರ ಗುಣಮಟ್ಟದ ವಿದ್ಯುತ್ ಪಡೆಯಲು ಸ್ವಂತ ಟ್ರಾನ್ಸ್ ಫಾರ್ಮರ್ ಅಳವಡಿಸುವ ಯೋಜನೆ ಯಾವ ಹಂತದಲ್ಲಿದೆ;

ಆ) ಇದರ ಕಾರ್ಯ ಯೋಜನೆಯ ವಿವರಗಳೇನು;

ಇ) ಈಗಾಗಲೇ ರಾಜ್ಯದಲ್ಲಿ ಎಷ್ಟು ಜನ ರೈತರು ಇದರ ಪ್ರಯೋಜನ ಪಡೆದಿದ್ದಾರೆ.

ಈ) ಇದಕ್ಕಾಗಿ ರೈತರು ನೀಡಬೇಕಾಗಿರುವ ಹಣ ಎಷ್ಟು ಹಾಗೂ ಇದರ ಮಾನದಂಡಗಳೇನು;

ಉ) ಈ ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚವೆಷ್ಟು;

ಊ) ಕೆ.ಪಿ.ಟಿ.ಸಿ.ಎಲ್. ಎಷ್ಟು ಹಣ ನೀಡುತ್ತದೆ (ವಿವರ ನೀಡುವುದು);

ಋ) ಇದು ರೈತರಿಗೆ ಉಪಯೋಗಕ್ಕಿಂತ ತೊಂದರೆಯೇ ಹೆಚ್ಚು ಇದೆ ಎಂಬ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು);

ೠ) ಸದರಿ ಯೋಜನೆಯನ್ನು ರದ್ದುಪಡಿಸಲಾಗುವುದೇ ಅಥವಾ ಪುನಃ ಮುಂದುವರಿಸಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ನೀರಾವರಿ ಪಂಪುಸೆಟ್ಟು ಬಳಕೆದಾರರ ಅನುಕೂಲಕ್ಕಾಗಿ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಸರ್ಕಾರವು "ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರ್ ಹೊಂದಿ" (ಓವೈಟಿ) ಯೋಜನೆಯನ್ನು ಈ ಹಿಂದೆ ದಿನಾಂಕ 21–10–2003ರ ಆದೇಶದ ಮೂಲಕ ಜಾರಿಗೆ ತಂದಿರುತ್ತದೆ. ಆದರೆ, ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ರೈತರಿಂದ ಅಂತಹ ಒಳ್ಳೆಯ ಪ್ರತಿಕ್ರಿಯೆ ಬಂದಿರುವುದಿಲ್ಲ.

ಆ) ಇದರ ಕಾರ್ಯ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

ಅ) ಹೊಸ 11 ಕೆ.ವಿ. ಹೆಚ್.ಟಿ. ಮಾರ್ಗವನ್ನು ವಿಸ್ತರಿಸಿ, ಹಾಗೂ 10/15 ಕೆ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಿ ಹೊಸ ನೀರಾವರಿ ಪಂಪುಸೆಟ್ಟು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದು.

ಆ) ಪ್ರತಿಯೊಂದು ನೀರಾವರಿ ಪಂಪುಸೆಟ್ಟಿಗೆ ಪ್ರತ್ಯೇಕವಾದ 10/15 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವುದರಿಂದ , ರೈತರು ತಮ್ಮ ಪಂಪ್‌ಸೆಟ್ಟಿಗೆ ತಮ್ಮದೇ ಆದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಹೊಂದುವುದರ ಜೊತೆಗೆ, ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬೆಳವಣಿಗೆಗೆ ಕಡಿವಾಣ ಹಾಕುವುದಕ್ಕೆ ಸಹಕಾರಿಯಾಗುತ್ತದೆ. ಅಲ್ಲದೇ, ವಿದ್ಯುತ್ತಿನ ಗುಣಮಟ್ಟದಲ್ಲಿ ಸುಧಾರಣೆ ಆಗುತ್ತದೆ. ಎಲ್.ಟಿ. ಲೈನ್ ವಿಸ್ತರಣೆ ಇರುವುದಿಲ್ಲ. ಕಡಿಮೆ ಅವಧಿಯಲ್ಲಿ ಪಂಪುಸೆಟ್ಟು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಾಯಿಸುತ್ತದೆ.

ಇ) ರಾಜ್ಯದಲ್ಲಿ ಸದರಿ ಯೋಜನೆಯಡಿಯಲ್ಲಿ ತಮ್ಮ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆದಿರುವ ರೈತರ ಒಟ್ಟು ಸಂಖ್ಯೆ 3155.

ಈ) ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ನೀರಾವರಿ ಪಂಪುಸೆಟ್ಟು ಅರ್ಜಿದಾರರು 50:50 ಅನುಪಾತದ ಆಧಾರದ ಮೇಲೆ ಭರಿಸಬೇಕಾಗಿರುತ್ತದೆ. ಭಾವಿ ನೀರಾವರಿ ಪಂಪುಸೆಟ್ಟು ಬಳಕೆದಾರರು ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚದಲ್ಲಿ ಅವರುಗಳ ಪಾಲನ್ನು ಅಂದರೆ, 25,000/– ರೂ. ಗಳನ್ನು ಪಾವತಿಸಬೆಕಾಗಿರುತ್ತದೆ. ಉಳಿದ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ತಾವೇ ಸ್ವಯಂ ಭರಿಸುತ್ತಿವೆ.

ಉ) ಈ ಯೋಜನೆಯಡಿ ಪ್ರತಿ ಹೊಸ ನೀರಾವರಿ ಪಂಪುಸೆಟ್ಟಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚ ಸುಮಾರು 50,000/– ರೂ.ಗಳೆಂದು ಅಂದಾಜು ಮಾಡಲಾಗಿದ್ದು. ಈ ವೆಚ್ಚದಲ್ಲಿ ನೀರಾವರಿ ಪಂಪುಸೆಟ್ಟು ಅರ್ಜಿದಾರರು ರೂ. 25,000/– ಗಳನ್ನು ಪಾವತಿಸಬೇಕಾಗಿರುತ್ತದೆ. ಉಳಿದ ರೂ. 25.000/– ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಾಗಿರುತ್ತದೆ. ಈ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲು ತಗಲುವ ವೆಚ್ಚವು ಒಂದು ವೇಳೆ ಹೆಚ್ಚಾದಲ್ಲಿ ಅದನ್ನೂ ಸಹ ವಿದ್ಯುತ್ ಸರಬರಾಜು ಕಂಪನಿಗಳೇ ಸಂಪೂರ್ಣವಾಗಿ ಭರಿಸಬೇಕಾಗಿರುತ್ತದೆ.

ಋ) ನೀರಾವರಿ ಪಂಪುಸೆಟ್ಟು ಬಳಕೆದಾರರ ಅನುಕೂಲಕ್ಕಾಗಿಯೇ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯ ಪ್ರಯೋಜನೆಗಳು ಈ ಕೆಳಕಂಡಂತಿವೆ.

1) ಎಲ್.ಟಿ. ಮಾರ್ಗಗಳು ಇಲ್ಲದಿರುವುದರಿಂದ ಎಲ್.ಟಿ. ಮಾರ್ಗದಲ್ಲಿ ವೋಲ್ಟೇಜ್ ಡ್ರಾಪ್ ಆಗುವ ಸಂಭವ ಇರುವುದಿಲ್ಲ.

2) ವೋಲ್ಟೇಜ್‌ನ ಮಟ್ಟದಲ್ಲಿ ಸುಧಾರಣೆಯಾಗುತ್ತದೆ.

3) ಪಂಪುಸೆಟ್ಟುಗಳು ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ, ಅದೇ ಅವಧಿಯಲ್ಲಿ ಹೆಚ್ಚು ನೀರು ಎತ್ತಬಹುದು.

4) ರೈತ ಸಮೂಹಕ್ಕೆ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಖಾತ್ರಿಮಾಡುತ್ತದೆ.

5) ಅನಧಿಕೃತವಾಗಿ ವಿದ್ಯುತ್ ಪಡೆಯುವುದನ್ನು ತಡೆಗಟ್ಟಬಹುದು.

ತತ್ಪರಿಣಾಮವಾಗಿ ಅನಧಿಕೃತ ಲೋಡಿನಿಂದ ಆಗುವ ಟ್ರಾನ್ಸ್‌ಫಾರ್ಮರ್‌ನ ವಿಫಲತೆಯು ಕಡಿಮೆಯಾಗುವುದರಿಂದ, ಅಧಿಕೃತ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಆಗುವ ವಿದ್ಯುತ್ ಅಡಚಣೆಯನ್ನು ತಡೆಗಟ್ಟಬಹುದಾಗಿದೆ.

ಆದಾಗ್ಯೂ ಈ ಯೋಜನೆಯು ದುಬಾರಿಯಾದ್ದಾಗಿದ್ದು ಮತ್ತು ರೈತರಿಗೆ ಪ್ರಿಯದಾಯಕವಾಗಿರುವುದಿಲ್ಲ.

ಋಋ) ರೈತರು ಈ ಯೋಜನೆಯ ಬಗ್ಗೆ ಅಷ್ಟೊಂದು ಉತ್ಸುಕರಾಗಿಲ್ಲದೇ ಇರುವುದರಿಂದ ಹಾಗೂ ಜನಪ್ರತಿನಿಧಿಗಳು ಹಲವಾರು ಸಂದರ್ಭಗಳಲ್ಲಿ 'ಓವೈಟಿ' ಯೋಜನೆಯಡಿ ನಿಗದಿಪಡಿಸಲಾದ ಶುಲ್ಕವು ರೈತರುಗಳಿಗೆ ಹೊರೆಯಾಗುತ್ತಿದೆಯೆಂದು ಸರ್ಕಾರದ ಗಮನಕ್ಕೆ ತಂದಿರುವ ಹಿನ್ನೆಲೆಯಲ್ಲಿ, ಇದಕ್ಕೆ ಪರ್ಯಾಯವಾಗಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಬಗ್ಗೆ ಹೊಸ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.